# ಕರುಣಾ ಕವಚ – ಶ್ರೀ ಗೋಪಾಲದಾಸರು

ಸ್ಮರಿಸುವೆ ನಾ ನಿಮ್ಮ ಚರಣಕಮಲ ಗುರು ವಿಜಯರಾಯ ।
ಶರಣಜನಪ್ರಿಯ ಪರಮಕರುಣಾನಿಧಿ ವಿಜಯರಾಯ ॥ ಪ ॥

ಜನ್ಮಾರಭ್ಯವು ನಿಮ್ಮಗುಣಕರ್ಮಗಳೆಲ್ಲ ವಿಜಯರಾಯ ।
ಇನ್ನು ನಾ ವರ್ಣಿಸಲೆಷ್ಟರವನು ಗುರು ವಿಜಯರಾಯ ॥೧॥

ದಿವಿಜರ ವೇಷದಿಂದವನಿಯೊಳುದುಸಿದ್ಯೊ ವಿಜಯರಾಯ ।
ದಿವಿಜರಿಂದಲಿ ಪ್ರತಿದಿವಸ ಬಿಡದಲಿದ್ಯೋ ವಿಜಯರಾಯ ॥೨॥

ಭಾಗವತಧರ್ಮವಹಿಸಿ ತ್ರಿರಾವರ್ತಿ ವಿಜಯರಾಯ ।
ಭಾಗೀರಥಿಯ ಚನ್ನಾಗಿ ಸೇವಿಸಿದ್ಯೊ ವಿಜಯರಾಯ ॥೩॥

ಕಂಚಿಕಾಳ್ಹಸ್ತಿ ಶ್ರೀರಂಗಸೇತುಯಾತ್ರೆ ವಿಜಯರಾಯ ।
ಪಂಚವಾರವು ಸಂಚರಿಸಿ ಸೇವಿಸಿದಯ್ಯ ವಿಜಯರಾಯ ॥ ೪॥

ಮರಿಯಾದೆಯಿಲ್ಲದೆ ವರಗಿರಿಯಾತ್ರೆಯ ವಿಜಯರಾಯ ।
ಪರಿಪರಿಕ್ಷೇತ್ರಕ್ಕೆ ಪೋಗಿ ಪೂಜಿಸಿದಯ್ಯ ವಿಜಯರಾಯ ॥೫॥

ಮಹಿಯಲ್ಲಿ ತಿರುಗಿ ಸರ್ವಕ್ಷೇತ್ರದಿ ವಿಜಯರಾಯ ।
ವಹಿಸಿದಾಸತ್ವ ವೈಷ್ಣವ ಸಿದ್ಧಾಂತ ವಿಜಯರಾಯ ॥೬॥

ಗುರೂಪದೇಶಕನಾಗಿ ವ್ಯಾಸಕಾಶಿಯಲ್ಲಿದ್ಯೋ ವಿಜಯರಾಯ ।
ದುರ್ಯೋನಿಯಲ್ಲಿ ಬಂದ ವಂಶ ಉದ್ಧರಿಸಿದ್ಯೋ ವಿಜಯರಾಯ ॥೭॥

ಸ್ವಚ್ಛವಾಗಿ ಗಂಗಾತೀರ ವಾಸಮಾಡಿ ವಿಜಯರಾಯ ।
ಹೆಚ್ಚಾದ ಪರ್ವಣಿಯೊಳು ಮತ್ಸ್ಯೋದರಿತೋರ್ದೆ ವಿಜಯರಾಯ ॥೮॥

ತುಂಗಾತೀರದಿ ಕುಳಿತು ಗಂಗೆ ಪೆಚ್ಚಿಸಿದಿ ವಿಜಯರಾಯ ।
ಅಂಗದ ಮುಸುಕಿಲಿ ಪಾಂಡುರಂಗನ್ನ ಕಂಡ್ಯೊ ವಿಜಯರಾಯ ॥೯॥

ಮಧ್ವಮತದ ಸಾರ ಕವನದಿ ರಚಿಸಿದ್ಯೊ ವಿಜಯರಾಯ ।
ಅದ್ವೈತಸಿದ್ಧಾಂತಾಬದ್ಧವೆನಿಸಿದ್ಯೊ ವಿಜಯರಾಯ ॥ ೧೦ ॥

ಶುದ್ಧ ತತ್ವಸಾರ ಸುಳಾದಿ ಪದಮಾಡಿ ವಿಜಯರಾಯ ।
ಹೃದ್ಯದಿ ಧಿಮಿಕೆಂದು ಹರಿಯ ಕುಣಿಸಿದ್ಯೊ ವಿಜಯರಾಯ ॥೧೧॥

ಸದಾಚಾರಸಂಪತ್ತು ಮಧುಕರವೃತ್ತಿಯು ವಿಜಯರಾಯ ।
ಕದನ್ನ ಉಂಡರಿಯರು ಶಿಷ್ಯಜನಸಂಘ ವಿಜಯರಾಯ ॥೧೨॥

ಭಕ್ತರ ಅಪಮೃತ್ಯುಬಿಡಿಸಿ ಆಯುವಿತ್ತೆ ವಿಜಯರಾಯ ।
ಪ್ರತ್ಯಕ್ಷ್ಯವಲ್ಲವೆ ಮನವೆ ಇದಕೆ ಸಾಕ್ಷಿ ವಿಜಯರಾಯ ॥೧೩॥

ನಿತ್ಯಾನ್ನ ಪುತ್ರೋತ್ಸವಗಳು ಭೃತ್ಯರಿಗೆ ವಿಜಯರಾಯ ।
ಮತ್ತೆ ಧರ್ಮ ಮುಂಜಿ ಮದುವೆಗಳ ಮಾಡಿಸಿದ್ಯೊ ವಿಜಯರಾಯ ॥ ೧೪ ॥

ಭಕ್ತಜನರಿಗೆ ತತ್ವ ಉಪದೇಶವ ಮಾಡಿ ವಿಜಯರಾಯ ।
ಹೃತ್ಕಮಲದಿ ಹರಿಯ ತಿಳಿಸಿ ಸದ್ಗತಿಗಭಯ ಇತ್ತ್ಯೊನೀ ವಿಜಯರಾಯ ॥ ೧೫ ॥

ಎಲ್ಲರಲ್ಲಿ ಸಿರಿನಲ್ಲನ ಅಂಶವ ವಿಜಯರಾಯ ।
ನಿಲ್ಲಿಸಿದೆಯೊ ನಿನ್ನ ಬಗೆಯ ಬಲ್ಲವರ್‍ಯಾರೊ ವಿಜಯರಾಯ ॥ ೧೬ ॥

ಬಲ್ಲಿದ ನೀನೊಂದು ರೂಪದಿ ಎನ್ನಲ್ಲಿ ವಿಜಯರಾಯ ।
ನಿಲ್ಲಿಸಿದ್ದರೆ ಎಲ್ಲ ಜನರು ಒಲ್ಲೈಸೋರು  ವಿಜಯರಾಯ ॥೧೭॥

ನಿಮ್ಮ ಪುಣ್ಯದ ಶೇಷವಿನ್ನು ಉಂಬೆವೊ ನಾವು ವಿಜಯರಾಯ ।
ನಮ್ಮ ಸಾಮರ್ಥ್ಯವು ನಿಮ್ಮದೆಂದಿಗು ವಿಜಯರಾಯ ॥ ೧೮ ॥

ಎನ್ನಿಂದ ಆಗೋ ಸಾಧನವೆಲ್ಲ ನಿನ್ನದೊ ವಿಜಯರಾಯ ।
ಎನ್ನ ಪೊಂದಿಹರೆಲ್ಲ ನಿನ್ನ ದಾಸರೊ ಗುರು ವಿಜಯರಾಯ ॥ ೧೯ ॥

ಈಗ ಈ ಯುಗದಿ ಸಾಧನವೆಂಬುದು ಕಾಣೆ ವಿಜಯರಾಯ ।
ಯೋಗಿ ನಿನ್ನವರಿಗೆ ಬೇಗ ಒದಗುವುದೊ ವಿಜಯರಾಯ ॥೧೮॥

ಗುರು ನಿನ್ನ ಕರುಣಕವಚತೊಟ್ಟ ಭಕುತರ್ಗೆ ವಿಜಯರಾಯ ।
ಸಿರಿವರ ಗೋಪಾಲವಿಠಲರೇಯ ಕೈಪಿಡಿವನೊ ವಿಜಯರಾಯ ॥೨೧॥

ಶ್ರೀ ಗೋಪಾಲದಾಸರಿಂದ ವಿರಚಿತವಾದ
ಕರುಣಾ-ಕವಚ ಸ್ತೊತ್ರ (ಮೋದಕಸ್ತುತಿಯು) ಸಂಪೂರ್ಣವಾಯಿತು
ಶ್ರೀ ಕೃಷ್ಣಾರ್ಪಣಮಸ್ತು

# करुणा कवच – श्री गोपालदासरु

स्मरिसुवे ना निम्म चरणकमल गुरु विजयराय ।
शरणजनप्रिय परमकरुणानिधि विजयराय ॥ प ॥

जन्मारभ्यवु निम्मगुणकर्मगळेल्ल विजयराय ।
इन्नु ना वर्णिसलेष्टरवनु गुरु विजयराय ॥१॥

दिविजर वेषदिंदवनियोळुदुसिद्यो विजयराय ।
दिविजरिंदलि प्रतिदिवस बिडदलिद्यो विजयराय ॥२॥

भागवतधर्मवहिसि त्रिरावर्ति विजयराय ।
भागीरथिय चन्नागि सॆविसिद्यो विजयराय ॥३॥

कंचिकाळहस्ति श्रीरंगसॆतुयात्रे विजयराय ।
पंचवारवु संचरिसि सॆविसिदय्य विजयराय ॥ ४॥

मरियादेयिल्लदे वरगिरियात्रेय विजयराय ।
परिपरिक्षेत्रक्के पोगि पूजिसिदय्य विजयराय ॥५॥

महियल्लि तिरुगि सर्वक्षेत्रदि विजयराय ।
वहिसिदासत्व वैष्णव सिद्धांत विजयराय ॥६॥

गुरूपदेशकनागि व्यासकाशियल्लिद्यो विजयराय ।
दुर्योनियल्लि बंद वंश उद्धरिसिद्यो विजयराय ॥७॥

स्वच्छवागि गंगातीर वासमाडि विजयराय ।
हेच्चाद पर्वणियोळु मत्स्योदरितोर्दे विजयराय ॥८॥

तुंगातीरदि कुळितु गंगे पेच्चिसिदि विजयराय ।
अंगद मुसुकिलि पांडुरंगन्न कंड्यो विजयराय ॥९॥

मध्वमतद सार कवनदि रचिसिद्यो विजयराय ।
अद्वैतसिद्धांताबद्धवेनिसिद्यो विजयराय ॥ १० ॥

शुद्ध तत्वसार सुळादि पदमाडि विजयराय ।
हृद्यदि धिमिकेंदु हरिय कुणिसिद्यो विजयराय ॥११॥

सदाचारसंपत्तु मधुकरवृत्तियु विजयराय ।
कदन्न उंडरियरु शिष्यजनसंघ विजयराय ॥१२॥

भक्तर अपमृत्युबिडिसि आयुवित्ते विजयराय ।
प्रत्यक्ष्यवल्लवे मनवे इदके साक्षि विजयराय ॥१३॥

नित्यान्न पुत्रोत्सवगळु भृत्यरिगे विजयराय ।
मत्ते धर्म मुंजि मदुवेगळ माडिसिद्यो विजयराय ॥ १४ ॥

भक्तजनरिगे तत्व उपदेशव माडि विजयराय ।
हृत्कमलदि हरिय तिळिसि सद्गतिगभय इत्त्योनी विजयराय ॥ १५ ॥

एल्लरल्लि सिरिनल्लन अंशव विजयराय ।
निल्लिसिदेयो निन्न बगेय बल्लवर्यारो विजयराय ॥ १६ ॥

बल्लिद नीनोंदु रूपदि एन्नल्लि विजयराय ।
निल्लिसिद्दरे एल्ल जनरु ओलैसोरु विजयराय ॥१७॥

निम्म पुण्यद शेषविन्नु उंबेवो नावु विजयराय ।
नम्म सामर्थ्यवु निम्मदेंदिगु विजयराय ॥ १८ ॥

एन्निंद आगो साधनवेल्ल निन्नदो विजयराय ।
एन्न पोंदिहरेल्ल निन्न दासरो गुरु विजयराय ॥ १९ ॥

ईग ई युगदि साधनवेंबुदु काणे विजयराय ।
योगि निन्नवरिगे बेग ओदगुवुदो विजयराय ॥१८॥

गुरु निन्न करुणकवचतोट्ट भकुतर्गे विजयराय ।
सिरिवर गोपालविठलरेय कैपिडिवनो विजयराय ॥२१॥

श्री गोपालदासरिंद विरचितवाद करुणा-कवच स्तोत्र (मोदकस्तुतियु) संपूर्णवायितु
श्री कृष्णार्पणमस्तु